ತಾರೀಖು 23ನೇ ಏಪ್ರೆಲ್ 1903.

ನಂ. ರೆ. 4024, ಸನ್ 1894ನೇ ಇಸವಿಯ VIIನೇ ನಂಬರ ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ, ಕೋಲಾರ ಡಿಸ್ಟ್ರಿಕ್ಟು ಗೋರಿಬಿದನೂರು ತಾಲ್ಲೂಕಿನಲ್ಲಿರುವ ವೀರ್ಲಗೊಲ್ಲಹಳ್ಳಿಯ ಹೊಸ ಗ್ರಾಮನಿವೇಶನವನ್ನು ಮಾಡುವ ಬಗ್ಗೆ ಬೇಕಾಗಿರುತ್ತವೆ. ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ವ 3 (ಸಿ) ನೇ ಸೆಕ್ಷನ್‌ಗಳನುಸರಿಸಿ ಚಿಕ್ಕಬಳ್ಳಾಪುರದ ಸಬ್ ಡಿವಿಜನ್ ಆಫಿಸರ್ರವರು ಸದರೀ ಜಮೀನುಗಳನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರ್ರ ಹೆಸರು.	ಜಮೀನಿನ ವಿವರ.			ಬೇಕಾಗಿರುವ ಜಮೀನು.		ಚಕ್ಕುಬಂದಿ.			
					ಸರ್ವೆ ನಂ.	ವಿಸ್ತೀರ್ಣ.	ಆಕಾರ.	ವಿಸ್ತೀರ್ಣ.	ಆಕಾರ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಕೋಲಾರ	ಗೋರಿಬಿದನೂರು	ಗೋರಿಬಿದನೂರು	ವೀರ್ಲಗೊಲ್ಲಹಳ್ಳಿ	1. ಮಲ್ಲಪ್ಪ ಬಿನ್ ಕವುಡಯ್ಯ	ಖುಷ್ಕಿ 46	ಎ. ಗುಂ. 9—25	ರೂ.ಆ.ಪೈ. 8-8-0	ಎ. ಗುಂ. 1—10	....	ಹನುಮಂತನ ಸರ್ವೆ ನಂ. 1	ರಾಜಮ್ಮ, ಪುಟ್ಟ ಮತ್ತು ವೆಂಕೋಜಿಯ ಎಸ್‌ನಂ.31	ಸೆಟ್ಟಪ್ಪ, ಪರ್ವತ ಮತ್ತು ಮಲ್ಲ ಇವರುಗಳ ಎಸ್. ನಂ. 47	ದಾಸಿಗ ಮತ್ತು ಮೂಡ್ಲಿಗನ ಎಸ್ ನಂ. 7 ಮತ್ತು ರಂಗನ ಎಸ್.ನಂ. 30
				2. ಸೆಟ್ಟಪ್ಪ ಬಿನ್ ಪುಟ್ಟಯ್ಯ	47	6— 2	7-0-0	1— 0	..	ಶ್ರೀನಿವಾಸ ತಮ್ಮಾಜಿಯ ಎಸ್ ನಂ. 50 ಮತ್ತು ರಾಜಮ್ಮನ ಎಸ್ ನಂ. 57	ಹನುಮಂತನ ಎಸ್ ನಂ. 43	ಬೀರನ ಎಸ್ ನಂ. 49	ಸೆಟ್ಟಪ್ಪ, ಮೂಡ್ಲಿಗ ಮತ್ತು ಮಲ್ಲಪ್ಪ ಇವರುಗಳ ಎಸ್ ನಂ. 46

ತಾರೀಖು 5ನೇ ಮೇ 1903.

ನಂ. 553—ಎಕ್ಸೈ. ಫೈ. 2-01, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 198ನೇ ಆರ್ಟಿಕಲ್ ಅನುಸರಿಸಿ ಶಿವಮೊಗ್ಗ ಎಕ್ಸೈಜ್ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಾದ ಮೆ|| ಬಿ. ಚಾಮುಂಡಣ್ಣನವರಿಗೆ 1903ನೇ ಮಾರ್ಚಿ 26ನೇ ತಾರೀಖಿನ ಲಾಗಾಯತು ಏಪ್ರೆಲ್ ಗುರ್ರೆ ತಾರೀಖಿನ ವರಿವಿಗೆ 7 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿತ್ತು.

ಹುಕುಂ ಬಮೋಜೀಬ್,

ಹೆಚ್. ವಿ. ನಂಜುಂಡೈಯ್ಯ,

ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನ್ಮೆಂಟ್. ಸೆಕ್ರೆಟೆರಿ.

ಪಬ್ಲಿಕ್ ವರ್ಕ್ಸ.

ಇಸ್ತಿಹಾರ್ನಾಮಾ.

ತಾರೀಖು 28ನೇ ಏಪ್ರೆಲ್ 1903, ಉದಕಮಂಡಲ.

ಕ್ಯಾಂಪ್. ನಂ. 12—112, ಸರ್ಕಾರ ಕೆಲಸಕ್ಕೋಸ್ಕರ ಇದರಡೀ ಕಂಡ ವರ್ಗಾವರ್ಗಿಯು ಮತ್ತು ನೇಮಣೂಕಿಯು ಹುಕುಂ ಮಾಡಲ್ಪಟ್ಟಿರುತ್ತವೆ:—

1. ಎಕ್ಸಿಕ್ಯೂಟಿವ್ ಇಂಜನಿಯರಾದ ಮೆ|| ವಿ. ಅರುಣಾಚಲ ಮೊದಲಿಯಾರ್ರು, ಕಡೂರುನಿಂದ ಮೈಸೂರು ಡಿವೀಜನಿಗೆ ಚಾರ್ಜು ಒಪ್ಪಿಸಿದ ನಂತರ ಕೆಲಸಕ್ಕೆ ದಾಖಲಾಗತಕ್ಕದ್ದು.

2. ತಮ್ಮ ರಜಾದೊಳಗಾಗಿ ಕೆಲಸಕ್ಕೆ ವಾಪಸು ಬರಲು ಅಪ್ಪಣೆ ಮಾಡಲ್ಪಟ್ಟ ಮೊದಲನೇ ಕ್ಲಾಸಿನ ಅಸಿಸ್ಟೆಂಟ್ ಇಂಜನಿಯರಾದ ಮೆ|| ಎಚ್. ಜೆ. ಮೊಲ್ಲಾಯಿ ಯವರು ಅಫೀಷಿಯೇಟಿಂಗ್ ಎಕ್ಸಿಕ್ಯೂಟಿವ್ ಇಂಜನಿಯರಾಗಿ ಮೊಕರರ್ರಾಮಾಡಲ್ಪಟ್ಟು ಕಡೂರು ಡಿವೀಜನಿಗೆ ನೇಮಿಸಲ್ಪಟ್ಟಿರುತ್ತಾರೆ. ಕೂಡ್ಲೆ ಕೆಲಸಕ್ಕೆ ದಾಖಲಾಗತಕ್ಕದ್ದು.

ತಾರೀಖು 29ನೇ ಏಪ್ರೆಲ್ 1903.

ನಂ. 436—2300, ಇಂಪೀರಿಯಲ್ ಎರಡನೇ ಗ್ರೇಡಿನ ಎಕ್ಸಿಕ್ಯೂಟಿವ್ ಇಂಜನಿಯರ್ ಮತ್ತು ಪಶ್ಚಿಮ ಸರ್ಕಲಿನ ಅಫೀಷಿಯೇಟಿಂಗ್ ಸೂಪರಿಂಟೆಂಡಿಂಗ್ ಇಂಜನಿಯರಾದ ಕ್ಯಾಪ್ಟನ್ ಎ. ಜೆ. ಡೀಲಾಬಿನಿಯರ್, ಆರ್. ಇ., ಯವರಿಗೆ ಮಾಹೆ ಮಜಕೂರು 13ನೇ ತಾರೀಖಿನಾರಭ್ಯ 3 ತಿಂಗಳುಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ಹುಕುಂ ಬಮೋಜೀಬ್,

ಡಬ್ಲ್ಯೂ. ಎಸ್. ಟ್ರೇಲ್, ಕ್ಯಾಪ್ಟನ್, ಆರ್. ಇ.,

ಫಾರ್ ಪಬ್ಲಿಕ್ ವರ್ಕ್ಸ್ ಇಲಾಖಾ, ಮೈಸೂರ ಗವರ್ನ್ಮೆಂಟ್ ಸೆಕ್ರೆಟೆರಿ.